

# ಕಪ್ಪೆ ಸಾಮ್ರಾಜ್ಯದ ‘ವಿಷಕಂಠ’





ಅಮೆಜಾನ್‌ನ ಮಳೆಕಾಡಿನಲ್ಲಿರುವ ‘ಆರೋ ಫ್ರಾಗ್’ಗಳನ್ನು ಜಗತ್ತಿನ ವಿಷಕಾರಿ ಕಪ್ಪೆಗಳೆಂದು ಘೋಷಿಸಲಾಗಿದ್ದು, ಈ ಕಪ್ಪೆಗಳನ್ನು ಮುಟ್ಟುವುದೂ ಕೂಡ ಅಪಾಯಕಾರಿಯಂತೆ. ಅವುಗಳ ದೇಹದಲ್ಲಿನ ಹನಿ ವಿಷವೂ ಸಹ ಮನುಷ್ಯನನ್ನು ಕೊಲ್ಲುವಷ್ಟು ಸಾಮರ್ಥ್ಯ ಹೊಂದಿದೆ.  ಪ್ರತೀ ಕಪ್ಪೆಯ ದೇಹದಲ್ಲೂ ಅಂದಾಜು 10000 ಇಲಿಗಳನ್ನು ಕೊಲ್ಲುವಷ್ಟು ವಿಷ ಸಂಗ್ರಹವಾಗಿರುತ್ತದೆಯಂತೆ..!

‘ಡೆಂಡ್ರೋಬೇಟ್ಸ್ ಟಿನ್ಕೋರಿಯಸ್’ ಎಂಬ ವೈಜ್ಞಾನಿಕ ಹೆರರುಳ್ಳ ‘ಡೆಂಡ್ರೋಬೇಟಿಡೆ’ ಕುಟುಂಬದ ಉಭಯವಾಸಿ ಪಂಗಡದ ಈ ಕಪ್ಪೆಗಳು ಸದಾಕಾಲ ತೇವಾಂಶವುಳ್ಳ ಜೌಗು ಪ್ರದೇಶಗಳನ್ನು ಇಷ್ಟಪಡುವುಗಳಾಗಿದ್ದು ಹೆಚ್ಚಾಗಿ ಮಧ್ಯ ಹಾಗೂ ದಕ್ಷಿಣ ಅಮೆರಿಕದ ಮಳೆ ಬೀಳುವ ಕಾಡುಗಳಲ್ಲಿನ ಕೆಸರು, ತಗ್ಗುಪ್ರದೇಶ ಹಾಗೂ ಕೊಳಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಉಷ್ಣವಲಯದ ಬೊಲೊವಿಯಾ, ವೆನುಜುವೆಲಾ, ಫ್ರೆಂಚ್ ಗಯಾನ, ಪೆರು, ಪನಾಮಾ ಮತ್ತು ಹವಾಯಿ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಹೆಚ್ಚಾಗಿ ನೆಲಕ್ಕೆ ಅಂಟಿಕೊಂಡೇ ವಾಸಿಸುವ ಇವು ಕೆಲವೊಮ್ಮೆ ನೆಲದಿಂದ 10 ಮೀಟರುಗಳಷ್ಟು ಎತ್ತರದವರೆಗೂ ಮರಗಳನ್ನೇರಿ ಕೀಟಗಳನ್ನು ಬೇಟೆಯಾಡುತ್ತಿರುತ್ತವೆ. ಸಾಕಷ್ಟು ಸಣ್ಣಗಾತ್ರದ ಈ ಕಪ್ಪೆಗಳು 1.5 ಸೆಂ.ಮೀ ನಿಂದ 6 ಸೆಂ.ಮೀ ಗಳಷ್ಟು ಉದ್ದವಿರುತ್ತವೆ.

ವಿಷದಿಂದಲೇ ಮೈಬಣ್ಣ: ಭೂಮಿಯ ಮೇಲಿನ ಅಪಾಯಕಾರಿ ಹಾಗೂ ವಿಷಕಾರಿ ಜೀವಿಗಳಲ್ಲಿ ‘ಆರೋ ಕಪ್ಪೆ’ಗಳನ್ನೂ ಒಂದೆಂದು ಪರಿಗಣಿಸಲಾಗಿದೆ. ಇವುಗಳು ನೋಡಲು ಆಕರ್ಷಕವಾಗಿದ್ದು ಹಳದಿ, ಕೆಂಪು, ಕೇಸರಿ, ನೀಲಿ, ಹಸಿರು, ಕಪ್ಪು ಹೀಗೆ ವಿವಿಧ ಮೈಬಣ್ಣದಿಂದ ಕೂಡಿರುತ್ತವೆ. ವಿಶೇಷವೆಂದರೆ ಇವುಗಳ ಮೈಬಣ್ಣದ ಗಾಢತೆ ಹೆಚ್ಚಿದ್ದಷ್ಟೂ ಅವುಗಳು ಹೆಚ್ಚು ವಿಷಕಾರಿಯಂತೆ. ಅವುಗಳ ದೇಹದೊಳಗಿನ ವಿಷದಿಂದಾಗಿಯೇ ಮೈಬಣ್ಣ ಗಾಢತೆ ಹಾಗೂ ವೈವಿಧ್ಯತೆಯನ್ನು ಪಡೆದಿರುತ್ತದೆಯಂತೆ. ತನ್ನ ಮೇಲೆ ದಾಳಿ ಮಾಡಲು ಪ್ರಯತ್ನಿಸುವ ಶತ್ರುಗಳಿಗೆ ಇದು ತನ್ನ ಮೈಬಣ್ಣದಿಂದಲೇ ತಾನೆಷ್ಟು ಅಪಾಯಕಾರಿಯೆಂಬುದನ್ನು ಸೂಚಿಸುತ್ತದೆ.

■ ಪ.ನಾ.ಹಳ್ಳಿ.ಹರೀಶ್ ಕುಮಾರ್